# ಅಮೃತ ವಿಶ್ವವಿದ್ಯಾಲಯದ ಟಿಬಿಐಗೆ ಅತ್ಯುತ್ತಮ ಇನ್‌ಕ್ಯುಬೇಟರ್ ರಾಷ್ಟ್ರೀಯ ಪ್ರಶಸ್ತಿ

Published 16-May-2017 07:55 IST




***ಬೆಂಗಳೂರು: ಅಮೃತ ವಿಶ್ವವಿದ್ಯಾಲಯದ ಟೆಕ್ನಾಲಜಿ ಬ್ಯುಸಿನೆಸ್ ಇನ್‌ಕ್ಯುಬೇಟರ್(ಟಿಬಿಐ)ಗೆ ದೇಶದ ಅತ್ಯುತ್ತಮ ಟೆಕ್ನಾಲಜಿ ಇನ್‌ಕ್ಯುಬೇಟರ್ ಪ್ರಶಸ್ತಿ ಲಭಿಸಿದೆ.***

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಟಿಬಿಐ ಅನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿತ್ತು. ನವದೆಹಲಿಯಲ್ಲಿ ಆಯೋಜಿಸಿದ್ದ 19 ನೇ ರಾಷ್ಟ್ರೀಯ ತಂತ್ರಜ್ಞಾನ ದಿನದ ಸಮಾರಂಭದಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರು ಅಮೃತ ವಿಶ್ವವಿದ್ಯಾಲಯದ ಮುಖ್ಯಕಾರ್ಯನಿರ್ವಹಣಾಧಿಕಾರಿ ಕೃಷ್ಣಶ್ರೀ ಅಚ್ಯುತನ್ ಮತ್ತು ಮುಖ್ಯ ಆಡಳಿತಾಧಿಕಾರಿ ಸ್ನೇಹಲ್ ಶೆಟ್ಟಿ ಅವರಿಗೆ ಈ ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿಯನ್ನು ವಿತರಿಸಿದರು.

ಈ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅಮೃತ ವಿಶ್ವವಿದ್ಯಾಲಯದ ಮುಖ್ಯಕಾರ್ಯನಿರ್ವಹಣಾಧಿಕಾರಿ ಕೃಷ್ಣಶ್ರೀ ಅಚ್ಯುತನ್, ``ಅಮೃತ ವಿಶ್ವವಿದ್ಯಾಲಯದ ಟೆಕ್ನಾಲಜಿ ಬ್ಯುಸಿನೆಸ್ ಇನ್‌ಕ್ಯುಬೇಟರ್ 2008 ರಲ್ಲಿ ಆರಂಭವಾಯಿತು. ಕೇವಲ 8 ವರ್ಷಗಳಲ್ಲಿ ಇದು ದೇಶದ ಅತ್ಯುತ್ತಮ ಮತ್ತು ನಂಬರ್ ಒನ್ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು ಅಮೃತ ವಿಶ್ವವಿದ್ಯಾಲಯದ ಶ್ರೇಷ್ಠತೆಯ ಪ್ರತೀಕವಾಗಿದೆ. ಇದುವರೆಗೆ ನಾವು 72 ಸ್ಟಾರ್ಟ್ ಅಪ್ ಕಂಪನಿಗಳಿಗೆ ಪ್ರೋತ್ಸಾಹ ನೀಡಿದ್ದು, 216 ಸ್ಟಾರ್ಟ್ ಅಪ್‌ಗಳಿಗೆ ಪೂರಕವಾದ ಮಾರ್ಗದರ್ಶನ ನೀಡಿದ್ದೇವೆ'' ಎಂದು ತಿಳಿಸಿದರು.

ನೀತಿ ಆಯೋಗದ ಅಟಲ್ ಇನ್ನೋವೇಶನ್ ಮಿಷನ್(ಎಐಎಂ) ದೇಶದ ಒಟ್ಟು ಆರು ಅತ್ಯುತ್ತಮ ಇನ್‌ಕ್ಯುಬೇಟರ್‌ಗಳನ್ನು ಆಯ್ಕೆ ಮಾಡಿತ್ತು. ಅದರಲ್ಲಿ ಅಮೃತ ವಿಶ್ವವಿದ್ಯಾಲಯದ ಟಿಬಿಐ ಕೂಡ ಒಂದಾಗಿತ್ತು.

ನೀತಿ ಆಯೋಗದ ಮುಖ್ಯಕಾರ್ಯನಿರ್ವಹಣಾಧಿಕಾರಿ ಅಮಿತಾಭ್ ಕಾಂತ್ ಅವರ ಪ್ರಕಾರ, ಈ ಆರು ಅಪರೂಪದಲ್ಲಿ ಅಪರೂಪದ್ದೆನಿಸುವ ಇನ್‌ಕ್ಯುಬೇಟರ್‌ಗಳಿಗೆ ಹಣಕಾಸು ಸೇರಿದಂತೆ ಮತ್ತಿತರೆ ಪ್ರೋತ್ಸಾಹಗಳನ್ನು ನೀಡಿ ಜಾಗತಿಕ ಮಟ್ಟದ ಮಾನದಂಡಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುವಂತೆ ಮಾಡುವ ಉದ್ದೇಶವಿದೆ. ಈ ಹಿನ್ನೆಲೆಯಲ್ಲಿ ಈ ಎಲ್ಲಾ ಆರೂ ಇನ್‌ಕ್ಯುಬೇಟರ್‌ಗಳು ಮುಂದಿನ ಎರಡು ವರ್ಷಗಳಿಗೆ 1.4 ದಶಲಕ್ಷ ಡಾಲರ್ (10 ಕೋಟಿ ರೂಪಾಯಿಗಳು) ನೆರವನ್ನು ಪಡೆಯಲಿವೆ.